ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 05/10/2019

# ಕೇಂದ್ರದಿಂದ ರಾಜ್ಯಕ್ಕೆ ಮುಂಗಡ ಪರಿಹಾರ
# 1200 ಕೋಟಿ ನೆರೆ ನೆರವು

## ಕರ್ನಾಟಕದ ಕೂಗಿಗೆ ಕಡೆಗೂ ಓಗೊಟ್ಟ ಕೇಂದ್ರ | ಎನ್‌ಡಿಆರ್‌ಎಫ್ ನಿಧಿ ಅಡಿ ಹಣ
## ಉತ್ತರ ಕರ್ನಾಟಕ ನೆರೆ: ₹38000 ಕೋಟಿ ನಷ್ಟ | ₹3500 ಕೋಟಿ ಕೇಳಿದ್ದ ರಾಜ್ಯ

5/10/19

**• ಕನ್ನಡಪ್ರಭ ವಾರ್ತೆ** ನವದೆಹಲಿ

ಹಿಂದೆಂದೂ ಕಾಣದಂಥ ಭೀಕರ ಪ್ರವಾಹಕ್ಕೆ ತುತ್ತಾಗಿದ್ದ ರಾಜ್ಯಕ್ಕೆ ಪ್ರವಾಹ ಪರಿಹಾರ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ ಎಂಬ ಜನಾಕ್ರೋಶ ಪ್ರಬಲವಾಗುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರ ರಾಜ್ಯಕ್ಕೆ ₹1,200 ಕೋಟಿ ಮುಂಗಡ ಪರಿಹಾರ ಧನ ಘೋಷಿಸಿದೆ. ಈ ಹಣ ಶನಿವಾರವೇ ರಾಜ್ಯದ ಕೈ ಸೇರಲಿದೆ.



ಕರ್ನಾಟಕದಲ್ಲಿನ ರಾಜ್ಯ ವಿಪತ್ತು ಪರಿಹಾರ ನಿಧಿಯಲ್ಲಿನ ಕೊರತೆಯನ್ನು ಗಮನಿಸಿ ಪ್ರವಾಹ ಪೀಡಿತರಿಗೆ ನೆರವಾಗುವ ಉದ್ದೇಶದಿಂದ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ (ಎನ್‌ಡಿಆರ್‌ಎಫ್) ಹಣ ನೀಡುತ್ತಿರುವುದಾಗಿ ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ. ಕರ್ನಾಟಕ ಸರ್ಕಾರ ನೀಡಿದ ಮಧ್ಯಂತರ ಮನವಿ ಪತ್ರ ಮತ್ತು ರಾಜ್ಯಕ್ಕೆ ಭೇಟಿ ನೀಡಿದ ಸಚಿವರ ಸಮಿತಿ ತಂಡವು ನೀಡಿದ ಮಧ್ಯಂತರ ವರದಿ ಆಧಾರದಲ್ಲಿ ಈ ಪರಿಹಾರ ನೀಡುತ್ತಿರುವುದಾಗಿ ಕೇಂದ್ರ ಸರ್ಕಾರ ಪ್ರಕಟಣೆಯಲ್ಲಿ ಹೇಳಿಕೊಂಡಿದೆ. ➘9

# ಬಿಎಸ್‌ವೈ ಸರ್ಕಾರ ನಿರಾಳ

## ಕೇಂದ್ರ ಸರ್ಕಾರದಿಂದ ಪ್ರವಾಹ ಪರಿಹಾರ ಬಾರದೆ ಇಕ್ಕಟ್ಟು
## ಅಧಿವೇಶನ ಎದುರಿಸುವ ಚಿಂತೆಯಲ್ಲಿದ್ದ ರಾಜ್ಯ ಸರ್ಕಾರ

**ಆತಂಕ ಏನಿತ್ತು?**

1. ನೆರೆ ಪರಿಹಾರ ಬಾರದ ಬಗ್ಗೆ ವಿಪಕ್ಷಗಳು, ಜನರ ತೀವ್ರ ಆಕ್ರೋಶ
2. ಸ್ವಪಕ್ಷೀಯರಿಂದಲೂ ರಾಜ್ಯ, ಕೇಂದ್ರ ಸರ್ಕಾರಗಳ ವಿರುದ್ಧ ಕಿಡಿ
3. ಹಣ ಬಿಡುಗಡೆಗಾಗಿ ಕೇಂದ್ರದ ಮೇಲೆ ಒತ್ತಡ ಹೇರಲಾಗದ ಸ್ಥಿತಿ
4. ಅ.10ರ ಅಧಿವೇಶನದಲ್ಲಿ ವಿಪಕ್ಷ ದಾಳಿ ಎದುರಿಸಬೇಕಾದ ಇಕ್ಕಟ್ಟು
5. ಮುಂಗಡ ಪರಿಹಾರ ಬಂದ ಕಾರಣ ಕೇಂದ್ರದ ಸಮರ್ಥನೆ ಸುಲಭ

**• ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರತಿಪಕ್ಷಗಳ ಮುಖಂಡರು, ಸಾರ್ವಜನಿಕರಷ್ಟೇ ಅಲ್ಲದೆ ಸ್ವಪಕ್ಷೀಯರೂ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ ಬಳಿಕ ಎಚ್ಚೆತ್ತುಕೊಂಡ ಕೇಂದ್ರ ಸರ್ಕಾರ ರಾಜ್ಯದ ನೆರೆ ಪರಿಹಾರಕ್ಕಾಗಿ 1,200 ಕೋಟಿ ರು. ಬಿಡುಗಡೆ ಮಾಡುವುದಾಗಿ ಘೋಷಿಸಿರುವುದರಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ತುಸು ನಿಟ್ಟುಸಿರು ಬಿಟ್ಟಿದೆ.

ಇದೇ ತಿಂಗಳ 10ರಿಂದ ಆರಂಭವಾಗಲಿರುವ ವಿಧಾನಮಂಡಲದ ಉಭಯ ಸದನಗಳ ಅಧಿವೇಶನದಲ್ಲಿ ಆಡಳಿತಾರೂಢ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ತಮ್ಮದೇ ರೀತಿಯಲ್ಲಿ ರಣತಂತ್ರ ರೂಪಿಸುವಲ್ಲಿ ನಿರತವಾಗಿದ್ದವು. ಅಧಿವೇಶನ ಹೇಗೆ ಎದುರಿಸುವುದು ಎಂಬ ಚಿಂತೆಯಲ್ಲಿದ್ದ ಯಡಿಯೂರಪ್ಪ ಅವರು ಈಗ ಒಂದಿಷ್ಟು ನಿರಾಳರಾಗಿದ್ದಾರೆ. ಪ್ರತಿಪಕ್ಷಗಳನ್ನು ಸಮರ್ಥವಾಗಿಯೇ ಎದುರಿಸಲು ಸಜ್ಜಾಗಲಿದ್ದಾರೆ. ➘14